ಕಿತ್ತೂರು ರಾಣಿ ಚನ್ನಮ್ಮಾಜೀಯವರ ವಿಜಯೋತ್ಸವವನ್ನು ಕಾಕತಿಯಲ್ಲಿ ಆಚರಿಸುವ ಕುರಿತು ಮಾನ್ಯ ಹಿರಿಯ ಉಪವಿಭಾಗಾಧಿಕಾರಿಗಳು, ಬೆಳಗಾವಿ ಉಪವಿಭಾಗ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:24-09-2011ರಂದು ಪೂ.11.00 ಗಂಟೆಗೆ ಜರುಗಿದ ಸಭೆಯ ನಡುವಳಿಕೆಗಳು.

<u>ಉಪಸ್ಥಿತರು</u>

1. ಹಿರಿಯ ಉಪವಿಭಾಗಾಧಿಕಾರಿಘಲು,ಬೆಳಗಾವಿ ಉಪವಿಭಾಗ.ಬೆಳಗಾವಿ.

2 ಕ್ಷೇತ್ರ ಶಿಕ್ಷಣಾಧಿಕಾರಿಗಳು,ಬೆಳಗಾವಿ
3 ಶಿಶು ಅಬಿವೃಧ್ಧಿ ಯೋಜನಾಧಿಕಾರಿಗಳು,ಬೆಳಗಾವಿ (ಗ್ರಾ)
4 ಸರ್ಕಲ್ ಪೋಲಿಸ್ ಇನ್ಸಪೆಕ್ಟರ್ ,ಕಾಕತಿ
5 ಶ್ರೀಮತಿ ಮೀನಾಕ್ಷಿ ಬ ಶೇಖರಗೋಳ,ಅದ್ಯಕ್ಷರು,ಗ್ರಾಮಪಂಚಾಯತ್,ಕಾಕತಿ
6 ಅದ್ಯಕ್ಷರು,ಎ ಪಿ ಎಮ್ ಸಿ ಬೆಳಗಾವಿ
7 ಶ್ರೀಮತಿ ದುರಿಗೆವ್ವ ಮುಚ್ಚಂಡಿ,ಜಿಲ್ಲಾ ಪಂಚಾಯತ್ ಸದಸ್ಯರು,ಕಾಕತಿ
8 ಶ್ರೀಮತಿ ಕಾಂಚನಾ ನಾರ್ವೇಕರ ತಾಲೂಕಾ ಪಂಚಾಯತಿ ಸದಸ್ಯರು,ಕಾಕತಿ.
9 ಉಪ ತಹಶೀಲದಾರಆಡ ಕಚೇರಿ, ಕಾಕತಿ
10 ಕಂದಾಯ ನೀರಿಕ್ಷಕರು ಕಾಕತಿ
11 ಪಿ.ಡಿ.ಓ ಗ್ರಾಮ ಪಂಚಾಯತಿ ಕಾಕತಿ
12.ಕಾರ್ಯದರ್ಶಿ ಗ್ರಾಮ ಪಂಚಾಯತಿ ಕಾಕತಿ
13. ಡಾ: ಎಸ್.ಡಿ.ಪಾಟೀಲ, ಚನ್ನಮ್ಮ ಸಮೀತಿ ಅಧ್ಯಕ್ಷರು,ಕಾಕತಿ
14. ಶ್ರೀ ಸತ್ತೆಪ್ಪ ಎಸ್. ಮುಚ್ಚಂಡಿ ಸಾ:ಕಾಕತಿ
15. ಶ್ರೀ ಶ್ರೀ ಗುಂಡು ಎಸ್. ತಳವಾರ ಸಾ.ಕಾಕತಿ
16. ಶ್ರೀ ಅಶೋಕ ಸಿ. ಕುಂಬಾರಸಾ.ಕಾಕತಿ
17. ಶ್ರೀ ಈರವ್ವಾ ಬಿ. ಮಠಪತಿ
18. ಶ್ರೀ ರಾಜು ಬಾಗೇವಾಡಿ, ನ್ಯಾಯವಾದಿಗಳು,ಸಾ:ಕಾಕತಿ.
19 .ಶ್ರೀ ರಾಮಾ.ಕ. ಕಡೋಲಕರ ಸಾ.ಕಾಕತಿ
20. ಶ್ರೀ ಬಾಳ ಕೋಚೇರಿ ಸಾ.ಕಾಕತಿ
21. ಶ್ರೀ ಈರಣ್ಣಾ ಸಿ ರಾಜಕಟ್ಟಿ
22. ಶ್ರೀ ದಾಖಲು ಫಕೀರಾ ದೊನಜಿ
23. ಶ್ರೀಮತಿ ಬಿಬಿಜಾನ ಹ. ದರಗಾವಾಲೆ
24. ಶ್ರೀಮತಿ ಯಲ್ಲವ್ವಾ ದೇವರುಶಿ
25. ಶ್ರೀ ಜೆ.ಆರ್. ಹಿರೇಮಠ

26. ಶ್ರೀ ಜಿ.ಎಸ್. ಜಗಜಂಪಿ
27. ಶ್ರೀ ಬಿ.ಎಸ್.ದೇಸಾಯಿ
28. ಶ್ರೀಮತಿ ರೇಖಾ.ಸಿ. ಮಲ್ಲಮ್ಮಗೋಳ
29. ಶ್ರೀಮತಿ ಜ್ಯೋತಿ. ಡಿ. ಗವಿ
30. ಶ್ರೀಮತಿ ವರ್ಷಾ. ಎಲ್. ಮುಚ್ಚಂಡಿಕರ
31. ಶ್ರೀಮತಿ ಯಲ್ಲವ್ವಾ ಮ. ಪನಗುದ್ದಿ
32. ಶ್ರೀ ಅಪ್ಪಯ್ಯಾ ಶಿರಗನ್ನವರ
33. ಶ್ರೀ ಲಕ್ಷ್ಮಣ ಬಿ. ಮಾದಿಕರ
34. ಶ್ರೀ ಸಿ.ಎಸ್.ಪಾಟೀಲ
35. ಶ್ರೀ ಶ್ರೀ ಶಿವಗಂಗಪ್ಪಾ. ಬಿ. ಮಡಿವಾಳ
36. ಶ್ರೀ ಎ.ಬಿ. ಅರವಳ್ಳಿ
37. ಶ್ರೀ ಎಸ್.ಎನ್.ಪಾಟೀಲ
38. ಶ್ರೀ ಅರುಣ ತುಮರಿ
39. ಶ್ರೀ ವಾಯ್. ಎಚ್. ಕೋಳೆಕರ
40. ಶ್ರೀ ಎಸ್.ಎಸ್. ಮುಚ್ಚಂಡಿ
41. ಶ್ರೀ ಶಶಿಕಾಂತ ಪಾಟೀಲ ಸಾ:ಕಾಕತಿ
42. ಶ್ರೀ ಬಿ ಎಸ್ ದೇಸಾಯಿ ಸಾ:ಕಾಕತಿ
43. ಶ್ರೀ ಪರಸರಾಮ ನಾರ್ವೇಕರ ಸಾ:ಕಾಕತಿ
44. ಶ್ರೀ ಬಿ ಆಯ್ ದೇಸಾಯಿ ಸಾ:ಕಾಕತಿ.

ಸಭೆ ಪ್ರಾರಂಭದಲ್ಲಿ ಅಧ್ಯಕ್ಷರು ಹಾಜರ ಇದ್ದ ಎಲ್ಲರನ್ನು ಸ್ವಾಗತಿಸಿದರು .ಕಳೆದ ಸಲ ವಿಜಯೋತ್ಸವ ಆಚರಣೆ ಸಮಯದಲ್ಲಿ ಆದ ಕೆಲವು ನ್ಯೂನತೆಗಳು ಈ ಸಲ ಮರುಕಳಿಸದಂತೆ ಜಾಗ್ರತೆ ವಹಿಸುವಂತೆ ಎಲ್ಲರಗೂ ಮನವಿ ಮಾಡಿದರು. ಉಪಸ್ಥಿತರಿದ್ದ ಮಹನೀಯರುಗಳಿಗೆ ಈ ವಿಜಯೋತ್ಸವ ಕಾರ್ಯಕ್ರಮವನ್ನು ವಿಜ್ರಂಬಣೆಯಿಂದ ಆಚರಿಸುವ ಬಗ್ಗೆ ಸಲಹೆಸೂಚನೆಗಳನ್ನು ನೀಡುವಂತೆ ಮನವಿ ಮಾಡಿದರು.

ಡಾ.ಪಾಟೀಲ, ನ್ಯಾಯವಾದಿಗಳಾದ ಶ್ರೀ ಬಾಗೇವಾಡಿ ಮತು ಕೆಲವರು ಮಾತನಾಡಿ ದಿನದಿಂದ ದಿನಕ್ಕೆ ಮಾರುಕಟ್ಟೆಯಲ್ಲಿ ದರಗಳು ಎರಿಕೆ ಆಗುತ್ತಿರುವುದರಿಂದ ವಿಜೃಂಬಣೆಯಿಂದ ವಿಜಯೋತ್ಸವ ಆಚರಿಸಲು ಈಗ ಸರ್ಕಾರ ನೀಡುವ ರೂ.50,000/-ಗಳ ಅನುದಾನ ಸಾಕಾಗುವುದಿಲ್ಲ, ಕಾರಣ ಸರ್ಕಾರ ಇನ್ನೂ ಹೆಚ್ಚಿನ ಅನುದಾನ ನೀಡಬೇಕು ಅಂತಾ ತಿಳಿಸಿದರು. ಈ ಬಗ್ಗೆ ಅದ್ಯಕ್ಷರು, ಕಳೆದ ವರ್ಷದಂತೆ ಈ ಸಲವೂ ಸಹ ರೂ.50,000/- ವರೆಗೆ ಅನುದಾನ ದೊರಕಬಹುದಾಗಿದ್ದು ಆ ಮಿತಿಯೊಳಗೆ ಖರ್ಚು ಮಾಡಬಹುದಾಗಿದೆ ಎಂದು ತಿಳಿಸುತ್ತಾ ಹೆಚ್ಚಿನ ಅನುದಾನಕ್ಕಾಗಿ ಸಭೆಯ ಅಬಿಪ್ರಾಯವನ್ನು ಮಾನ್ಯ ಜಿಲ್ಲಾಧಿಕಾರಿಗಳ ದಯಾಪರ ಗಮನಕ್ಕೆ ತರಬಯಸುವುದಾಗಿ ತಿಳಿಸಿದರು . ತದನಂತರ ,

ದಿನಾಂಕ: 23-10-2010ರಂದು ನಡೆಯುವ ವಿಜಯೋತ್ಸವದ ಅಂಗವಾಗಿ ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ಚರ್ಚೆಯಾಗಿ ಜ್ಯೋತಿ ಬರಮಾಡಿಕೊಳ್ಳುವಿಕೆ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಮುಕ್ತ ವಾಲಿಬಾಲ್ ಪಂದ್ಯಾವಳಿ, ರಸಮಂಜರಿ ಕಾರ್ಯಕ್ರಮ ಏರ್ಪಡಿಸಲು ಸಭೆಯಲ್ಲಿ ಚರ್ಚಿಸಿ ಈ ಕೆಳಗಿನಂತೆ ತೀಮಾನಿಸಲಾಯಿತು..

## <u>ಕಾರ್ಯಕ್ರಮಗಳ ವಿವರ</u>

| | |
|---|---|
| 22-10-2011 | ಮುಕ್ತ ವ್ಹಾಲಿಬಾಲ್ ಪಂದ್ಯಾವಳಿ |
| 22-10-2011 | ಸಾ.6.00ಗಂಟೆಗೆ ವೀರರಾಣಿ ಚೆನ್ನಮ್ಮಾಜೀಯವರ ಜ್ಯೋತಿ ತರಲು ಬೈಲಹೊಂಗಲಕ್ಕೆ ಹೋಗುವುದು. |
| <u>23-10-2011</u> | |
| ಬೆ.8.00ಗಂಟೆಗೆ | ಜ್ಯೋತಿ ಬರಮಾಡಿಕೊಳ್ಳುವದು. (ಆರ್ಚ್‌ದಿಂದ) |
| ಬೆ.8.30ಗಂಟೆಗೆ | ಜ್ಯೋತಿ ಹಾಗೂ ಮುಖ್ಯ ಅತಿಥಿಗಳು,ಮಾನ್ಯ ಸಂಸದರು,ಮಾನ್ಯ ಸಚಿವರು,ಮಾನ್ಯ ಶಾಸಕರು ಅವರನ್ನು ಗ್ರಾಮದ ಚನ್ನಮ್ಮ ಕಮಾನದ ಹತ್ತಿರ ಸ್ವಾಗತಿಸುವದು ಮತ್ತು ಚನ್ನಮ್ಮ ಮೂರ್ತಿಯ ವರೆಗೆ ಕರೆದುಕೊಂಡು ಬರುವುದು |
| ಬೆ.9.00ಗಂಟೆಗೆ | ಮಾನ್ಯ ಶಾಸಕರು ಅಧ್ಯಕ್ಷತೆಯಲ್ಲಿ ವೀರರಾಣಿ ಚನ್ನಮ್ಮಾಜೀ ಯವರ ಪುತ್ಥಳಿಗೆ ಪೂಜೆ & ಗಣ್ಯ ವ್ಯೆಕ್ತಿಗಳ ಸನ್ಮಾನ ಕಾರ್ಯಕ್ರಮ |
| ಬೆ.9.30 ಗಂಟೆಗೆ | ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮಾನ್ಯ ಶಾಸಕರು,ಯಮಕನಮರಡಿ ಮತಕ್ಷೇತ್ರ , ಸದಸ್ಯರು, ಜಿಲ್ಲಾ ಪಂಚಾಯತ್ , ತಾಲೂಕ ಪಂಚಾಯತ್ ಸದಸ್ಯರು ಮತ್ತು ಅದ್ಯಕ್ಷರು,ಗ್ರಾಮಪಂಚಾಯತ್,ಕಾಕತಿ, ಹಾಗೂ ಸದಸ್ಯರ ಉಪಸ್ಥಿತಿಯಲ್ಲಿ ಮೆರವಣಿಗೆ ಉದ್ಘಾಟನೆ. |
| ಮ.2.00ಗಂಟೆಗೆ | ಮು.2.00ಗಂಟೆಯಿಂದ 4.00ಗಂಟೆಯವರೆಗೆ ಶ್ರೀ ಸಿದ್ದೇಶ್ವರ ಮಂಗಲ ಕಾರ್ಯಾಲಯದಲ್ಲಿ ಮಹಾಪ್ರಸಾದ |
| ಸಂಜೆ.5.30ಗಂಟೆ ದಿಂದ ರಾತ್ರಿ9.00ಗಂ. | ಶಾಲಾಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಿಡಿಮದ್ದು ಸಿಡಿಸುವ ಕಾರ್ಯಕ್ರಮ |
| ರಾತ್ರಿ 10.00ಗಂಟೆಗೆ | ದಾವಣಗೆರೆ ಬಳಗದವರಿಂದ ಆರ್ಕೆಸ್ಟ್ರಾ ಕಾರ್ಯಕ್ರಮ. |

ಈ ಒಂದು ಕಾರ್ಯಕ್ರಮಕ್ಕೆ ಅತಿಥಿಗಳನ್ನಾಗಿ ಯಾರನ್ನು ಅಹ್ವಾನಿಸಬೇಕೆಂಬ ಬಗ್ಗೆ ಸಹ ಸಬೆಯಲ್ಲಿ ಚರ್ಚಿಸಲಾಗಿ ಈ ಕೆಳಕಂಡ ಮಹನೀಯರ ಹೆಸರುಗಳು ಸಭೆಯಲ್ಲಿ ವ್ಯಕ್ತವಾದವು.

1) ಡಾ: ಚಂದ್ರಶೇಖರ ಕಂಬಾರ , ಸಾಹಿತಿಗಳು ಮತ್ತು ಜ್ಞಾನಪೀಠ ಪ್ರಶಸ್ತಿ ವಿಜೇತರು
2) ಶ್ರೀ ಸಿದ್ದನಗೌಡ ಪಾಟೀಲ . ಮಾಜಿ ಮಹಾಪೌರ,ಬೆಳಗಾವಿ ಮಹಾನಗರಸಬಭೆ ಮತ್ತು ಕನ್ನಡ ಧುರೀಣರು ಹಾಗೂ ಸಮಾಜಸೇವಕರು
3) ಶ್ರೀ ಎಂ.ಬಿ.ದೇಸಾಯಿ ಸ್ವಾತಂತ್ರ್ಯ ಹೋರಾಟಗಾರ .
4) ಡಾ:ಕಮತೆ, ಗಡಿನಾಡು ಸಂರಕ್ಷಣಾ ಸಮಿತಿ ಸದಸ್ಯರು ,ಚಿಕ್ಕೋಡಿ
5) ಶ್ರೀ ಭೀಮರಾವ ಘಸ್ತೆ,ವಾಲ್ಮೀಕಿ ಸಮಾಜದ ಮುಖಂಡರು " ಬೇಡರ " ಎಂಬ ಗ್ರಂಥದ ಕರ್ತೃಗಳು ಹಾಗೂ ಕನ್ನಡ ಪ್ರಭ ವಾರ್ಷಿಕ ವ್ಯಕ್ತಿಯೆಂದು ಆಯ್ಕೆಯಾದವರು.

ಈ ಬಗ್ಗೆ ಇನ್ನಷ್ಟು ವಿಚಾರವಿನಿಮಯ ಮಾಡಿ ಅತಿಥಿಗಳ ಹೆಸರನ್ನು ಅಂತಿಮಗೊಳಿಸುವದಾಗಿ ಅದ್ಯಕ್ಷರು ಸಭೆಗೆ ತಿಳಿಸಿದರು.

ಶ್ರೀ ಮರಿಕಟ್ಟಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬೆಳಗಾವಿ (ಗ್ರಾ) ಅವರು ಮಾತನಾಡಿ ವಿಜಯೋತ್ಸವ ಮೆರವಣಿಗೆ ಸಮಯದಲ್ಲಿ ಕುಂಭ ಹೊತ್ತ ನೂರು ಜನ ಮಹಿಳೆಯರ ಕುಂಭ ಮೇಳದ ವ್ಯವಸ್ಥೆಯನ್ನು ತಮ್ಮ ಇಲಾಖೆವತಿಯಿಂದ ಮಾಡುವುದಾಗಿ ತಿಳಿಸಿದರು. ಅದರಂತೆ, ಕಾಕತಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕರು ಮತ್ತು ಶಿಕ್ಷಣ ಸಂಯೋಜಕರು ಮಾತನಾಡಿ ಅಕ್ಟೋಬರ್ ತಿಂಗಳಲ್ಲಿ ಶಾಲೆಗಳಿಗೆ ದಸರಾ ಹಬ್ಬದ ನಿಮಿತ್ಯ ರಜೆ ಇರುತ್ತದೆ, ರಜೆ ಅವಧಿಯಲ್ಲಿ ಈ ಉತ್ಸವ ಬರುತ್ತಿರುವುದರಿಂದ ಉತ್ಸವದಲಿ ್ಲಮಕ್ಕಳು ಪಾಲ್ಗೋಳ್ಳಲು ಮತ್ತು ಉತ್ಸವಕ್ಕಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಕೂಲವಾಗುವಂತೆ ಅಕ್ಟೋಬರ 21,22,ಮತ್ತು 23ರಂದು ಕಾಕತಿಯಲ್ಲಿನ ಎಲ್ಲ ಶಾಲೆಗಳನ್ನು ತೆರೆದಿಟ್ಟು ಮಕ್ಕಳು ಕಡ್ಡಾಯವಾಗಿ ಶಾಲೆಗೆ ಹಾಜರ ಇರುವಂತೆ ಆದೇಶಿಸಬೇಕೆಂದು ವಿನಂತಿಸಿ ಈ 3 ದಿನಗಳ ರಜೆ ಬದಲಾಗಿ ಮುಂದಿನ ದಿನಗಳಲ್ಲಿ ಸ್ಥಾನಿಕ ರಜೆಯನ್ನು ಶಾಲೆಗೆ ನೀಡಿ ಹೊಂದಾಣಿಕೆ ಮಾಡಲು ಈ ಸಭೆಯ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗಳು (ಗ್ರಾ) ಬೆಳಗಾವಿ ಅವರಿಗೆ ವಿನಂತಿಸಲು ಮನವಿಮಾಡಿದರು. ಈ ಬಗ್ಗೆ ಅದ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳವರಿಗೆ ವಿನಂತಿಸುವದಾಗಿ ತಿಳಿಸಿದರು. ಗ್ರಾಮಪಂಚಾಯತ್ ಅದ್ಯಕ್ಷರು ಮಾತನಾಡಿ ಆಯೋಜಿತ ಕಾರ್ಯಕ್ರಮಗಳು ನಿಗಧಿತ ಸಮಯಕ್ಕೆ ಸರಿಯಾಗಿ ಪ್ರಾರಂಭಗೊಂಡು ಮುಕ್ತಾಯವಾಗಬೇಕು ಅಂತಾ ತಿಳಿಸುತ್ತಾ, ಶಾಲಾ ಮಕ್ಕಳು ಮೆರವಣಿಗೆಯಲ್ಲಿ ಬಾಗವಹಿಸಲು ಅಂದು

ಬೆಳಿಗ್ಗೆಯಿಂದಲೇ ಬರುತ್ತಿರುವದರಿಂದ ಅವರಿಗೆ ಬೆಳಗಿನ ಉಪಹಾರದ ವ್ಯೆವಸ್ಥೆ ಮಾಡಬೇಕೆಂದು ವಿನಂತಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿ ಮೆರವಣಿಗೆಯಲ್ಲಿ ಬಾಗವಹಿಸಲು ಬರುವ ಶಾಲಾಮಕ್ಕಳಿಗೆ ಉಪಹಾರದ ಪ್ಯಾಕೆಟ್( ಪೇಡೆ ಮತ್ತು ಖಾರಾ) ಒದಗಿಸಲು ಸೂಚಿಸಿದರು. ಈ ಬಗ್ಗೆ ಕಂದಾಯ ನಿರೀಕ್ಷಕ,ಕಾಕತಿಯವರು ವ್ಯೆವಸ್ಥೆ ಮಾಡಿ ಮೇಲ್ವಿಚಾರಣೆ ಮಾಡುವಂತೆ ಸಹ ಸೂಚಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಾಗವಹಿಸುವ ಶಾಲಾ ಮಕ್ಕಳ ಉಪಯೋಗಕ್ಕಾಗಿ ಲೇಜಿಮ್,ಡೆಂಬಲ್ಸ ಮತ್ತು ಮೇಕಪ್ ಸಲುವಾಗಿ ತಗಲಬಹುದಾದ ಅಂದಾಜ ವೆಚ್ಚ ರೂ. 5000/- ಗಳನ್ನು ರೂ.50,000/- ಗಳ ಅನುದಾನದಲ್ಲಿಯೇ ಭರಿಸಬೇಕೆಂದು ಸಹ ಅದ್ಯಕ್ಷರು ಸೂಚಿಸಿದರು.

ಉತ್ಸವದ ಕಾಲದಲ್ಲಿ ಮಾತ್ರ ವೀರರಾಣಿ ಚನ್ನಮ್ಮಾಜೀಯವರ ಪುತ್ಥಳಿಯ ಸುತ್ತಲೂ ಹೂವಿನ ಕುಂಡಗಳನ್ನು ಇಟ್ಟು ಉತ್ಸವ ಮುಗಿದ ಮೇಲೆ ಅವುಗಳನ್ನು ತೋಟಗಾರಿಕೆ ಇಲಾಖಯವರು ತೆಗೆದುಕೊಂಡು ಹೋಗುತ್ತಾರೆ. ಹಾಗೆ ಅವುಗಳನ್ನು ತೆಗೆದುಕೊಂಡು ಹೋಗದೆ ಅವುಗಳನ್ನು ಖಾಯಂತರೀಖ ಅಲ್ಲಿಯೇ ಇಟ್ಟು ಸುತ್ತಲಿನ ಜಾಗೆಯಲ್ಲಿ ಸ್ವಚ್ಚತೆಯನ್ನು ಕಾಪಾಡಿಕೊಂಡು ಬರಲು ಕ್ರಮ ತೆಗೆದುಕೊಳ್ಳಬೇಕೆಂದು ಕೆಲ ಸದಸ್ಯರು ಒತ್ತಾಯಿಸಿದರು.ಆದರೆ, ಹೂವಿನ ಕುಂಡಗಳನ್ನು ಖಾಯಂತರೀಖ ಇಟ್ಟರೆ ನಿರ್ವಹಣೆ ಮಾಡಲು ಸಾಧ್ಯವಾಗುವುದಿಲ್ಲವೆಂದು ಮತ್ತು ಮೇದಲಿನಂತೆ ವಾಪಸ್ ಒಯ್ಯುವುದೆ ಸೂಕ್ತವೆಂದು ಅಧ್ಯಕ್ಷರು ತಿಳಿಸಿದರು. ಚನ್ನಮ್ಮಾಜೀಯವರ ಮೂರ್ತಿ ಹಾಗೂ ಸುತ್ತಲಿನ ಜಾಗೆಯನ್ನು ಮೇಲಿಂದಮೇಲೆ ಸ್ವಚ್ಚಗೊಳಿಸುವ ಜವಾಬ್ಧಾರಿಯನ್ನು ಗ್ರಾಮಪಂಚಾಯತಿಯವರು ನಿರ್ವಹಿಸಬೇಕೆಂದು ಸಹ ಸಭೆಯಲ್ಲಿ ಎಲ್ಲರೂ ಒತ್ತಾಯಿಸಿದರು. ಮೂರ್ತಿಯ ಸುತ್ತ ಸ್ವಚ್ಚತೆಯನ್ನು ಕಾಯ್ದುಕೊಳ್ಳಲು ಪಂಚಾಯತಿ ಅಬಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ಕ್ರಮ ಜರುಗಿಸಲು ಅಧ್ಯಕ್ಷರು ಸೂಚನೆ ನೀಡಿದರು. ನ್ಯಾಯವಾದಿಗಳಾದ ಶ್ರೀ ಬಾಗೇವಾಡಿ ಅವರು ಮಾತನಾಡಿ ಕಾಕತಿಯಲ್ಲಿ ರಾಷ್ಟ್ರಿಯ ಹೆದ್ದಾರಿಯ ಪಕ್ಕದಲಿ ಈಗ ಇರುವ ಅರಣ್ಯ ಇಲಾಖೆ ಕಚೇರಿ ಬೇರೆ ಕಟ್ಟಡಕ್ಕೆ ಹೋಗುತ್ತಿರುವದರಿಂದ ಚನ್ನಮ್ಮಾಜಿಯವರ ಮೂರ್ತಿಯನ್ನು ಈಗಿರುವ ಸ್ಥಳದಿಂದ ಅಲ್ಲಿಗೆ ಸ್ಥಳಾಂತರಿಸಬೇಕು ಮತ್ತು ಹೀಗೆ ಮೂರ್ತಿಯನ್ನು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸ್ಥಾಪಿಸುವುದರಿಂದ ಹೆದ್ದಾರಿಯ ಮೇಲೆ ಹೋಗಿಬರುವ ಪ್ರವಾಸಿಗರಿಗೆ ವೀರರಾಣಿ ಚನ್ನಮ್ಮಾಜೀಯವರ ತವರು ಮನೆಯ ಸ್ಥಳ ಕಾಕತಿ ಎಂದು ಪರಿಚಯಿಸಿದಂತಾಗುತ್ತದೆ ಅಂತಾ ವಿನಂತಿಸಿದರು. ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಅವರ ಗಮನದಲ್ಲಿದ್ದು ಕಿತ್ತೂರು ಪ್ರಾಧಿಕಾರದ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸಿ ಕ್ರಮ ಜರುಗಿಸುವ ನಿರೀಕ್ಷೆ ಇದೆ ಅಂತಾ ತಿಳಿಸಿದರು.

ಕಾಕತಿಯಲ್ಲಿ ನಡೆಯುವ ವೀರರಾಣಿ ಚನ್ನಮ್ಮಾಜೀಯವರ ವಿಜಯೋತ್ಸವದ ಕಾರ್ಯಕ್ರಮದಲ್ಲಿ ಕಾಕತಿ ಗ್ರಾಮದ ಸಮಸ್ತ ನಾಗರೀಕರು ಸಕ್ರೀಯವಾಗಿ ಭಾಗವಹಿಸಿ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೋಂಡು ಸಹಕಾರ ನೀಡಿ ಯಶಸ್ವಿಗೊಳಿಸಬೇಕೆಂದು ಅಧ್ಯಕ್ಷರು ವಿನಂತಿಸಿದರು.

ವಂದನಾರ್ಪಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ಹಿರಿಯ ಉಪವಿಭಾಗಾಧಿಕಾರಿಗಳು
ಬೆಳಗಾವಿ ಉಪವಿಭಾಗ, ಬೆಳಗಾವಿ.